This distance can be reduced if people respect each other's individuality rather than impose ideas. Everyone needs space for desired opinions. The people from all generations can then live in peace and harmony.

**Vriddhi Shetty**
19EBAS

## ದಣಿವರಿಯದ ಕಾಯ ಶ್ರೀ ಶಶಿಧರ್ ಸರ್; ಕಾರ್ಕಳದ ಕ್ಷೇತ್ರ ಶಿಕ್ಷಣಾಧಿಕಾರಿಗಳು




ಸನ್ಮಾನಕ್ಕೆ ಅರ್ಹನಾಗುವುದೆಂದರೆ ಅದು ಸಾಮಾನ್ಯ ಸಾಧನೆಯಲ್ಲ. ಯಾಕೆಂದರೆ ವಿಶಿಷ್ಟ ಕಾರ್ಯ ವೈಖರಿಯೊಂದಿಗೆ ಹತ್ತರಲ್ಲಿ ಹನ್ನೊಂದರಂತಾಗದೆ ಮಾದರಿ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸರಳ ನಡತೆಯಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾಗುವುದು ಸಾಮಾನ್ಯ ಸಾಧನೆಯಲ್ಲ, ಅದು ಅಸಾಮಾನ್ಯವೇ ಸರಿ. ಅಂತಹ ಒಂದು ಅರ್ಹ, ಅಮೂಲ್ಯ ವ್ಯಕ್ತಿತ್ವದ ಪ್ರತಿರೂಪವನ್ನು ಗುರುತಿಸಿದ್ದು ಜ್ಞಾನಸುಧಾ ಬಳಗದ ಒಂದು ಹೆಮ್ಮೆಯ ಕ್ಷಣವಾಗಿ ಚಿರಕಾಲ ಉಳಿಯಲಿದೆ. ಇವರು ಬೇರಾರೂ ಅಲ್ಲ, ಕಾರ್ಕಳ ಜನತೆಗೆ ಚಿರ ಪರಿಚಿತರಾದ ಕಾರ್ಕಳ ಕ್ಷೇತ್ರದ ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿದ್ದ ಶ್ರೀ ಜಿ.ಎಸ್.ಶಶಿಧರ್‌ರವರು.

ಹತ್ತನೇ ತರಗತಿಯ ಫಲಿತಾಂಶ ವೃದ್ಧಿಗಾಗಿ ರೂಪಿಸಿದ 'ಮಿಷನ್ ಹಂಡ್ರಡ್' ಮೂಲಕ ಮನೆಮಾತಾದ ಇವರು ತಾಲೂಕಿನ ಶೈಕ್ಷಣಿಕ ಪ್ರಗತಿಗಾಗಿ ತಂದ 'ಗುಬ್ಬಚ್ಚಿ ಸ್ಪೋಕನ್ ಇಂಗ್ಲೀಷ್', 'ಕುಟೀರ ಶಿಕ್ಷಣ', 'ಮಿಶನ್ ಕ್ವಾಲಿಟಿ', 'ವರ್ಲಿ ಶಾಲೆಗೆ ಬರಲಿ', 'ಸ್ವಚ್ಛತೆಗಾಗಿ ಗುರುವಾರದ ವ್ರತ', 'ಇ-ಮ್ಯಾಗಜಿನ್ ಸ್ವರ್ಣ ತಿರುಳು', "ಎನ್.ಎಂ.ಎಂ.ಎಸ್" ಹಾಗೂ "ಎನ್.ಟಿ.ಎಸ್.ಇ"ಯ ಫಲಿತಾಂಶ ವೃದ್ಧಿಗಾಗಿ "ಸ್ವರ್ಣ ಪ್ರತಿಭಾನ್ವೇಷಣೆ" ಇದಲ್ಲದೆ ಶಿಕ್ಷಕರ ವೃತ್ತಿಗೌರವವನ್ನು ಹೆಚ್ಚಿಸಲು ತಂದ "ಗುರು ಸೇವೆ" ಮತ್ತು "ಗುರುಭ್ಯೋ ನಮಃ", ಪ್ರತಿಭಾವಂತ ಶಿಕ್ಷಕರನ್ನು ಶೈಕ್ಷಣಿಕವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ರೂಪಿಸಿದ "ಕಲರ್‌ಡ್ರೀಮ್ಸ್", "ಟೆಕ್‌ಟೀಮ್", "ಪೆನ್‌ಟೀಮ್", "ಹಸಿರು ಕಾರ್ಲ", "ಕ್ರೀಡಾಕಾರ್ಲ" ಹೀಗೆ ಇವರು ರೂಪಿಸಿದ ವಿನೂತನ ಯೋಚನೆ ಯೋಜನೆಗಳು ಅನನ್ಯ ಹಾಗೂ ಅನುಪಮವಾದವು.

ಇಂತಹ ಮೇರು ವ್ಯಕ್ತಿತ್ವಕ್ಕೆ ಕೃತಜ್ಞತೆ ಸಲ್ಲಿಸಲು ಜ್ಞಾನಸುಧಾ ಶಿಕ್ಷಣ ಸಂಸ್ಥೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಈ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಶ್ರೀ ಶಶಿಧರ್ ಇವರು ಜ್ಞಾನಸುಧಾದ ಎತ್ತರದ ಮಹಡಿಯಲ್ಲಿ ನನ್ನನ್ನು ಕರೆಸಿ ಕಾರ್ಕಳದ ಸಮಸ್ತ ಗೌರವವನ್ನು ನೀವು ಕೊಟ್ಟಿದ್ದೀರಿ ಎಂದು ಅಂದುಕೊಂಡಿದ್ದೇನೆ. ಬರೀ ಕಲ್ಲುಗಳಿದ್ದ ಜಾಗದಲ್ಲಿ ಹಸಿರಿನ ಅಕ್ಷರವನ್ನು ಹುಟ್ಟುಹಾಕಿ ಸ್ವಯಂ ಮಾದರಿಯಾಗಿರುವವರು ಡಾ.ಸುಧಾಕರ್ ಶೆಟ್ಟಿ. ನಾವು ಕೆಲಸ ಮಾಡುವ ಜಾಗದಲ್ಲಿ ಪೂರ್ಣ ಮನಸಿಟ್ಟು ಮಾಡುವ ಕೆಲಸ ಏನಿದೆ, ಅದೇ ನಮ್ಮನ್ನು ಕಾಯುತ್ತದೆ. ಅದನ್ನು ಕರ್ಮಯೋಗ ಎನ್ನುತ್ತಾರೆ. ಅದರಲ್ಲಿ ನಾವು ನಂಬಿಕೆ ಇಟ್ಟವರು. ಬಹುಶಃ ಜ್ಞಾನಸುಧಾ ಇಷ್ಟೊಂದು ಯಶಸ್ಸನ್ನು ಕಾಣುತ್ತಿದೆ ಅಂದರೆ, ಅದು ಒಮ್ಮಿಂದೊಮ್ಮೆಲೆ ಆವಿರ್ಭವಿಸಿದ ಹೂವಲ್ಲ. ಕಲ್ಲಿನ ನಡುವೆ ಅರಳಿದ ಹೂ ಎಂಬ ತನ್ನ ಮನದಾಳದ ಮಾತನ್ನು ಜ್ಞಾನಸುಧಾ ಬಳಗದೊಂದಿಗೆ ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ರೊ. ಮೋಹನ್ ಶೆಣೈ ವಹಿಸಿಕೊಂಡಿದ್ದರು. ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ.ಸುಧಾಕರ್ ಶೆಟ್ಟಿ, ಟ್ರಸ್ಟಿಗಳಾದ ಶ್ರೀ ಕರುಣಾಕರ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

## ಜ್ಞಾನಸುಧಾ: ಜೆ.ಇ.ಇ ಮೈನ್ ಹಾಗೂ ಕೆ. ವಿ. ಪಿ. ವೈ ಸಾಧಕ ವಿದ್ಯಾರ್ಥಿಗಳಿಗೆ ಗೌರವ ಪುರಸ್ಕಾರ 1 ಲಕ್ಷ 60 ಸಾವಿರ ಪ್ರೋತ್ಸಾಹಧನ ವಿತರಣೆ

### ಸಾಧನೆಗೆ ಪಂಚಸೂತ್ರ ಪಾಲಿಸಿ : ಶ್ರೀ ಜಿ. ಜಗದೀಶ್ ಜಿಲ್ಲಾಧಿಕಾರಿ, ಉಡುಪಿ

ನಮ್ಮ ವಿದ್ಯಾಭ್ಯಾಸ ಕೇವಲ ಅಕ್ಷರವಂತರನ್ನು ನಿರ್ಮಿಸಿ ಸಾಕ್ಷರರನ್ನಾಗಿಸದೆ ಮೌಲ್ಯಯುತವಾದ ಬದುಕನ್ನು ರೂಢಿಸಿಕೊಂಡು ಸಮಾಜಮುಖಿ ವ್ಯಕ್ತಿತ್ವವನ್ನು ರೂಪಿಸುವ ಶಿಕ್ಷಣದ ಅಗತ್ಯವಿದೆ. ಯಾವ ಕಾರ್ಯ ಸೇವಾಮನೋಭಾವದಲ್ಲಿರುವುದೋ ಅಲ್ಲಿ ಯಶಸ್ಸು ಇದೆ. ಯಾವ ಕಾರ್ಯವು ಲಾಭದುದ್ದೇಶದಿಂದ ಇರುವುದೋ ಅಲ್ಲಿ ಸೋಲು ಕಟ್ಟಿಟ್ಟ ಬುತ್ತಿ. ಮೊಬೈಲ್, ದುರಭ್ಯಾಸ, ಕಾಲಹರಣ ಮಾಡುವಂತಹ ಚಟುವಟಿಕೆ, ನಕಾರಾತ್ಮಕ ವ್ಯಕ್ತಿಗಳು ಮತ್ತು ಉದಾಸೀನ ಮನೋಭಾವ, ಈ ಐದು ಅಂಶಗಳಿಂದ ದೂರವಿದ್ದರೆ ಯಶಸ್ಸು ಸಿಗಲು ಸಾಧ್ಯ. ಅಜೆಕಾರು ಪದ್ಮಗೋಪಾಲ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷ ಡಾ.ಸುಧಾಕರ ಶೆಟ್ಟಿಯವರ ಸಮರ್ಥ ನಾಯಕತ್ವದಲ್ಲಿ ಇಂಥ ಗ್ರಾಮೀಣ ಭಾಗದಲ್ಲಿಯೂ ಶೈಕ್ಷಣಿಕವಾಗಿ ಹಾಗೂ ಕ್ರೀಡಾಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಿರುವುದರ ಕುರಿತು ಉಡುಪಿ ಜಿಲ್ಲಾಧಿಕಾರಿ ಶ್ರೀ ಜಿ.ಜಗದೀಶ್ ಮೆಚ್ಚುಗೆಯ ಮಾತುಗಳನ್ನಾಡಿದರು.

ಅವರು ಜೆ.ಇ.ಇ ಮೈನ್ ಹಾಗೂ ಕೆ.ವಿ.ಪಿ.ವೈ ಪರೀಕ್ಷೆಯಲ್ಲಿ ಮತ್ತು ಕ್ರೀಡಾಕ್ಷೇತ್ರದಲ್ಲಿ ಸಾಧನೆ ಮಾಡಿದ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವಕಾಲೇಜಿನ ವಿದ್ಯಾರ್ಥಿಗಳಿಗೆ ಆಯೋಜಿಸಿದ ಸನ್ಮಾನ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅಭ್ಯಾಗತರಾಗಿ ಭಾಗವಹಿಸಿದ್ದ ಎನ್.ಐ.ಟಿ.ಕೆ ಸುರತ್ಕಲ್‌ನ ಸ್ಟೂಡೆಂಟ್ ವೆಲ್‌ಫೇರ್ ಫಾರ್ಮರ್ ಡೀನ್ ಡಾ.ಎಸ್.ಎಂ.ಹೆಗ್ಡೆ ಮಾತನಾಡಿ ನಮ್ಮ ವೃತ್ತಿ ನಮಗೆ ನಿವೃತ್ತಿಯನ್ನು ತರಿಸಬಹುದು. ಆದರೆ ನಮ್ಮ ಪ್ರವೃತ್ತಿಯು ನಮಗೆ ನಿವೃತ್ತಿಯ ನಂತರವೂ ಜೀವನೋತ್ಸಾಹವನ್ನು ಸದಾ ಕಾಲ ಉಳಿಸುವಂತೆ ವ್ಯಕ್ತಿತ್ವ ರೂಪಿಸಿಕೊಂಡು ವಿದ್ಯಾರ್ಥಿಯಾದವನು ತಂದೆ, ತಾಯಿ, ಗುರುಗಳ ಹಾಗೂ ಸಮಾಜದ ಋಣವನ್ನು ಮರೆಯದೆ ತೀರಿಸುವಂತಹ ಸೌಜನ್ಯತೆ ಇರಬೇಕು ಎಂದು ಕರೆ ನೀಡಿದರು.

**ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ:**

ಕೆ.ವಿ.ಪಿ.ವೈ ಸಾಧಕರಾದ ಮನ್ವಿತ್ ಪ್ರಭು, ಸುಕ್ಷಿತ್ ಪಿ.ಎಚ್, ಅದೀಶ್ ಆರ್ ರವರನ್ನು ಹಾಗೂ ಜೆ.ಇ.ಇ ಮೈನ್-2021ರ ಪರೀಕ್ಷೆಯಲ್ಲಿ ಗಣಿತದಲ್ಲಿ 100ಕ್ಕೆ 100 ಅಂಕ ಗಳಿಸುವುದರೊಂದಿಗೆ 99.86 ಪರ್ಸಂಟೈಲ್ ಸಂಪಾದಿಸಿದ ಅಭಯ್ ಕಾಮತ್, 99.69 ಪರ್ಸಂಟೈಲ್ ಸಂಪಾದಿಸಿದ ಶ್ರೇಯಸ್ ಪೈ ಹಾಗೂ 99.35 ಪರ್ಸಂಟೈಲ್ ಗಳಿಸಿದ ಎಂ ಮನ್ವಿತ್ ಪ್ರಭು, ಜೆಇಇ ಮೈನ್ – ಬಿ.ಆರ್ಕ್‌ನಲ್ಲಿ 99.74 ಪರ್ಸಂಟೈಲ್ ಪಡೆದ ಶ್ರೀಹರಿ ಪಾಡಿಗಾರ್ ಇವರೆಲ್ಲರನ್ನು ಸನ್ಮಾನಿಸಿ ಒಟ್ಟು 1 ಲಕ್ಷ 30 ಸಾವಿರ ನಗದು ಪುರಸ್ಕಾರದ ಜೊತೆಗೆ 90ಕ್ಕಿಂತ ಅಧಿಕ ಪರ್ಸಂಟೈಲ್ ಪಡೆದ ಒಟ್ಟು 45 ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸಲಾಯಿತು. ಉತ್ತಮ ಫಲಿತಾಂಶಕ್ಕೆ ನೆರವಾದ ಉಪನ್ಯಾಸಕರಿಗೆ ಟ್ರಸ್ಟ್‌ನ ವತಿಯಿಂದ 30ಸಾವಿರ ನಗದು ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು. ಇತ್ತೀಚೆಗೆ ನಡೆದ ಜಿಲ್ಲಾವಾರು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಡಾ.ಸುಧಾಕರ ಶೆಟ್ಟಿಯವರು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಅಜೆಕಾರ್ ಪದ್ಮಗೋಪಾಲ ಎಜ್ಯುಕೇಶನ್ ಟ್ರಸ್ಟ್‌ನ ಟ್ರಸ್ಟಿಗಳಾದ ಶ್ರೀ ಕರುಣಾಕರ ಶೆಟ್ಟಿ, ಶ್ರೀಮತಿ ವಿದ್ಯಾ ಸುಧಾಕರ್ ಶೆಟ್ಟಿ, ಶ್ರೀ ಗಣಪತಿ ಪೈ, ಆಡಳಿತ ಮಂಡಳಿ ಸದಸ್ಯರಾದ ಶ್ರೀ ಶಾಂತಿರಾಜ್ ಹೆಗ್ಡೆ, ಶ್ರೀ ಪ್ರಕಾಶ್ ಶೆಣೈ, ಶ್ರೀ ಅನಿಲ್ ಕುಮಾರ್‌ಜೈನ್ ಉಪಸ್ಥಿತರಿದ್ದರು.



## Traditional classes or Online classes: Which one is better?

The Covid-19 pandemic has affected us in many ways. One of them is education of students. Before the Pandemic, we used to attend schools and colleges in person. After the outbreak of the virus, we had no other choice other than attending online classes. It was a major challenge for both teachers and students as we were not used to it. It was a newfangled way of teaching and learning. Both teachers and students took time to get adjusted to it. It was a complete change for me as a student who had just heard about online classes but never actually knew what it was. But according to me, going to college was better than online classes. There are many reasons backing it. There were many cases where either the students did not have smartphones or they did not have strong internet connection. We could just virtually interact with our lecturers for doubts. It is a difficult job when the subject is a practical one like accountancy, mathematics, statistics etc. Also, for online classes, we had to use mobiles or laptops which harm our eyes. It goes without saying that there wasn't a class atmosphere in online classes which we used to have in our colleges. From a teacher's point of view, students could not be personally observed. Their progress in studies could not be personally observed. The college had a dynamic environment. We had different classes even games to play, but online classes created a sense of isolation among students as they had to sit in the same place for hours together. The major problem of online classes was it gave students more freedom, more than they could handle. When the student got bored of classes he/she could just play games, keeping classes on. Due to improper hold on students' notes or assignments, it gave students an opportunity to procrastinate writing notes or finishing assignments. From the point of view of management of a school or college, it had to spend a lot on online platforms. So, we can conclude that at any given situation, traditional classes are always suitable when compared to online classes.

**G Vinith Kini**
19 EBAS

## Congratulations! (Dr.) Prajwal Kulal



(Dr.) Prajwal Kulal, faculty of Chemistry Department, JnanaSudha PU College, is from Hirgana. He is the proud son of Mr. Chandrashekar Kulal and Mrs. Jalaja Kulal. It's a great honor to mention that he has recently submitted PhD Thesis entitled ***'STUDIES ON HYBRID POLYMER HYDROGEL NANOCOMPOSITES: PREPARATION, CHARACTERIZATION AND APPLICATIONS'*** to Mangalore University for the award of Doctor of Philosophy in Chemistry under the guidance of Dr. Vishalakshi B., Professor, Department of Chemistry, Mangalore University. In addition to that, he has presented research papers at NITK-Suratkal, Mangalore University- Mangalagangothri,JSS University- Mysuru, BMSIT- Bengaluru, SDM- Ujire and Paher University- Rajasthan. He has published several research papers in many reputed international journals having very high impact factors. Also, he has attended many workshops related to Advanced Chemistry specifically in the field of Polymers Characterization conducted by various Universities of Karnataka. He has been one of the reputed members of Indian Council of Chemists, Agra, New Delhi since 2017. Added to this, he successfully cleared the K.SET which is conducted by the university of Mysuru and is eligible for the post of Assistant Professor in various Universities and Colleges of Karnataka.

Among these successes,**'The Young Scientist Award-2020'** is another feather in his cap. He has received this award for his research paper at the International conference on 'Green Chemistry for Clean Environment',which was conducted by Indian Chemical Society ,Kolkata in association with Pacific University, Udaipur, Rajasthan on October 3rd and 4th , 2020. His works have exemplified his determination towards exceptional accomplishment in the research field. **Team Jnanasudha proudly acclaims his stupendous achievements and wishes that his efforts may yield a tremendous outcome in future.**

## ಕಾರ್ಕಳ ಜ್ಞಾನಸುಧಾ ರಸಾಯನ ಪ್ರಯೋಗಾಲಯ



ಹೊಸಕಳೆಯಲಿ ಶೋಭಿಸುತ್ತಿದೆ ಜ್ಞಾನಸುಧಾದ ರಸಾಯನ ಮಂದಿರ
ಬೆರಗಾಗಿಸಿ ಮೂಡಿಸಿತು ವಿದ್ಯಾರ್ಥಿಗಳ ಮೊಗದಲಿ ಪೂರ್ಣಚಂದಿರ ।

ಸಾಲು ಸಾಲು ಸಭೆಗಳು ನಡೆದಿತ್ತು ಪ್ರಯೋಗಾಲಯಕ್ಕೆ ನೀಡಲು ಅಂತಿಮಸ್ಪರ್ಶ
ಮೂಡಿಸಿತ್ತದು ವಿಭಾಗದ ಉಪನ್ಯಾಸಕರ ಮನದಲ್ಲಿ ನವೋದಯದ ಹರ್ಷ ।

ಶುಭ್ರ ಸುಂದರ ಅಂಬರವಿದು ಲಾಟೀನು ತೂಗಿದ ಛಾವಣಿ
ಭಿತ್ತಿ ಮೇಲೆ ಕಾಣಸಿಗುವುದು ವಿಜ್ಞಾನಿಗಳ ಭಾವಚಿತ್ರಗಳ ಸರಪಣಿ ।

ಕತ್ತಲೂ ಇಲ್ಲದ ಬೆಳಕೂ ಅಲ್ಲದ ರೋಚಕ ಮಾಯಕ ಲೋಕ
ತೆರೆದಿಟ್ಟಂತೆ ಪೂರ್ಣ ಬಾಗಿಲು ಉಲ್ಲಾಸ ಉತ್ಸಾಹಗಳ ನಾಕ ।

ಹಲವಾರು ಮಿಶ್ರಣಗಳ ಜೊತೆಗೆ ವಿವಿಧ ಬಣ್ಣಗಳ ಆಟ
ಪ್ರತಿಯೊಬ್ಬರಿಗೂ ಮುದವೀಯುವ ಪ್ರಯೋಗಗಳ ಬಲುರಮ್ಯ ನೋಟ ।

ಜ್ಞಾನಸುಧಾಕ್ಕೊಂದು ಹೊಸತನ ಬಂದಿದೆ ಆಹಾ ಎಂಥಾ ಸೊಗಸು
ಸಂಭ್ರಮದಿ ನಲಿದಿದೆ ಉಲ್ಲಾಸದಿ ಪ್ರತಿಯೊಬ್ಬರ ಮನಸು ।

ರಚನೆ– **(ಡಾ.) ಪ್ರಜ್ವಲ್ ಕುಲಾಲ್,** ರಸಾಯನ ಶಾಸ್ತ್ರ ಉಪನ್ಯಾಸಕರು

## Young Scientist Award to Abhishek A Patil

The district level 'Young Scientist Award' competition was organised in Government P.U. college, Udupi on February 20th, 2021 in collaboration with Karnataka VijnanaParishat, Bengaluru, Department of Science and Technology, government of Karnataka, Department of Public Education, Udupi and the Department of Pre-University,Udupi. Abhishek A Patil of 1st PUC, PCMB from our college who is also an NCC cadet had participated in this competition and has won the 1st Place for his Science Model of 'Solar Illuminator Day Lighting System'.Dr. Sudhakar Shetty, the President of Ajekar Padma Gopal Education Trust has congratulated him for his commendable achievement.



## ಪ್ರಥಮ ರ್‍ಯಾಂಕ್ ವಿಜೇತ ಪೂರ್ವ ವಿದ್ಯಾರ್ಥಿ ಭರತ್. ಎಸ್



ಮೈಸೂರಿನ ಜೆ.ಎಸ್.ಎಸ್ ವಿಜ್ಞಾನ ಹಾಗೂ ತಂತ್ರಜ್ಞಾನ ವಿಶ್ವವಿದ್ಯಾಲಯದ ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಅಂತಿಮ ಪರೀಕ್ಷೆಯಲ್ಲಿ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವಕಾಲೇಜಿನ ಪೂರ್ವ ವಿದ್ಯಾರ್ಥಿ ಭರತ್‌ಎಸ್. ಅವರು ಪ್ರಥಮ ರ್‍ಯಾಂಕ್‌ನೊಂದಿಗೆ ಚಿನ್ನದ ಪದಕ ಪಡೆದಿರುತ್ತಾರೆ. ಈ ಸಾಧನೆಯೊಂದಿಗೆ ಬಿ.ಎಸ್ ಕೇಶವ ಕಿಶನ್ ಮೆಮೋರಿಯಲ್ ಎಂಡೋಮೆಂಟ್ ಮೆಡಲನ್ನು ತಮ್ಮದಾಗಿಸಿಕೊಂಡಿದ್ದಾರೆ. ಇವರು ಗಣಿತಶಾಸ್ತ್ರ ಪ್ರಾಧ್ಯಾಪಕ ಡಾ.ಶಂಕರನ್ ಪಿ ಹಾಗೂ ಶ್ರೀಮತಿ ಸತಿದೇವಿ ಅವರ ಪುತ್ರರಾಗಿದ್ದಾರೆ. ಭರತ್ ಇವರನ್ನು ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ಹಾಗೂ ಜ್ಞಾನಸುಧಾ ಬಳಗವು ಅಭಿನಂದಿಸಲು ಹರ್ಷ ವ್ಯಕ್ತಪಡಿಸುತ್ತಿದೆ.

## ಜ್ಞಾನಸುಧಾ ವಿದ್ಯಾರ್ಥಿನಿ – ಐ.ಡಿ.ಎಸ್.ಸಿ ಕ್ಯಾಂಪ್‌ಗೆ ಆಯ್ಕೆ



ಮೂಡಬಿದರೆಯ ಆಳ್ವಾಸ್ ವಿದ್ಯಾಸಂಸ್ಥೆಯಲ್ಲಿ ಇತ್ತೀಚೆಗೆ 18–ಕರ್ನಾಟಕ ಬೆಟಾಲಿಯನ್ ಆಯೋಜಿಸಿದ ಐ.ಡಿ.ಎಸ್.ಸಿ ಕ್ಯಾಂಪ್‌ನಲ್ಲಿ ಕಾರ್ಕಳ ಜ್ಞಾನಸುಧಾ ಪದವಿಪೂರ್ವ ಕಾಲೇಜಿನ ಎನ್.ಸಿ.ಸಿಕೆಡೆಟ್ ದಿಶಾ ಎಂ.ಬಿ.ಜಿಯುವರು, ಮುಂದೆ ಬೆಂಗಳೂರಿನಲ್ಲಿ ನಡೆಯಲಿರುವ ಕರ್ನಾಟಕ ಗೋವಾ ಡೈರಕ್ಟರೇಟ್ ಆಯೋಜಿಸುವ ಐ.ಡಿ.ಎಸ್.ಸಿ ಕ್ಯಾಂಪ್‌ಗೆ ಆಯ್ಕೆಗೊಂಡಿರುತ್ತಾರೆ. ಸಂಸ್ಥೆಯ ಅಧ್ಯಕ್ಷ ಡಾ. ಸುಧಾಕರ ಶೆಟ್ಟಿ, ಪ್ರಾಂಶುಪಾಲ ದಿನೇಶ್ ಎಂ ಕೊಡವೂರ್, ಕಾಲೇಜಿನ ಎನ್.ಸಿ.ಸಿ ಮಾರ್ಗದರ್ಶಕ ಶ್ರೀ ಸುಮಿತ್ ಅಭಿನಂದಿಸಿದ್ದಾರೆ.

## ಚಿತ್ರಕಲೆ



**Amogh**, *20 Commerce*



**Mourya J.P**, *19 PCMB*



**Shravya**, *19 PCMB*

# KARKALA JNANSUDHA PU COLLEGE

## MEMBERS IN PIVOTAL POSITION



**Mr. Dinesh M. Kodavoor**
M.A.
Principal



**Mr.Sahithya**
M.Com.
Vice Principal.,
HOD Commerce



**Mrs. Jyothi Padmanabh**
M.A, B.Ed.
P.R.O Jnanasudha Institutions
HOD English



**Dr. Mithun U**
M.Sc., PhD.
Dean ( Academics) ,
HOD Chemistry



**Mrs. Shakunthala M Suvarna**
D.Cs.& E, M.Sc.I.T.
Dean ( Student Affairs )
HOD Computer Science

## DEPARTMENT OF PHYSICS



**Mr. Praveen John D. Almeida**
M.Sc., M.Phil.
HOD Physics



**Mr. Abheesh Jain**
M.Sc., B.Ed.
Asst.HOD Physics
Coordinator- KVPY



**Mrs. Asha**
M.Sc.
Lectr. in Physics



**Ms. Preethika**
M.Sc., B.Ed.
Lectr. in Physics



**Mr.Manohar S.R.**
M.Sc.
Lectr. in Physics



**Mr. Rathan Kumar K.R.**
M.Sc.
Lecturer in Physics



**Mr. Sharath R**
M.Sc.
Lectr. In Physics



**Mrs. Seema Naik**
M.Sc., B.Ed.
Lectr. in Physics

## DEPARTMENT OF CHEMISTRY



**(Dr.) Prajwal.K**
M.Sc.
Asst.HOD Chemistry,
KSET-2018
PhD (Thesis submitted)
Received
Young Scientist
Award- 2020
from Indian Chemical
Society, Kolkata



**Mrs. Sowmya Acharya**
M.Sc.
Lectr. in Chemistry



**Mrs. Sujatha**
M.Sc.
Lectr. in Chemistry



**Mrs.Sujatha P.**
M.Sc.
Lectr. in Chemistry



**Mr.Harsha B.**
M.Sc.
Lectr. in Chemistry
PhD (Persuing)

## DEPARTMENT OF MATHEMATICS



**Mr. Sandeepa**
M.Sc., B.Ed.
Coordinator- S&CEA
HOD Mathematics



**Mr. Hemantha**
M.Sc., B.Ed.
Asst.HOD
Mathematics



**Mrs. Shashikala K S.**
M.Sc.,
Lectr. in Mathematics



**Mrs. Sharada Ambarish**
M.Sc., B.Ed.
Lectr. in Mathematics



**Ms.Ashwini Nayak R.**
M.Sc.,
Lectr. in Mathematics



**Mr. Hemanth Kamath**
M.Sc.,
Lectr. in Mathematics

## DEPARTMENT OF PHYSICAL EDUCATION



**Mrs. Sowjanya Hegde**
M.P.Ed.
Physical Education Director

# KARKALA JNANSUDHA ENGLISH MEDIUM SCHOOL & HIGH SCHOOL



**Mrs. Usha Rao U**
M.Sc., B.Ed
Principal
Lecturer in Mathematics,
The best teacher Award in Udupi District
and the best Achiever Award in
Mathematics in the year 2016-17



**Mrs. Vani K**
M.Sc., B.Ed
Vice Principal & Trained Graduate Teacher,
The best Achiever Award in Science
in the year 2016-17.
The best teacher Award in
Udupi District 2019-20.



**Ms. Pavithra T**
M.A. , B.Ed
Trained Graduate Teacher,
The best Achiever Award in
Kannada in the year 2015-16
The best Achiever Award in
Kannada in the year 2016-17



**Mr. Arun Kumar**
B.A, B.P.Ed.
Physical Education Teacher



**Mrs. Jyotsna Gajanana Sathe**
M.A
Trained Graduate Teacher,



**Mrs. Shobha Pai**
M.A., B.Ed
Trained Graduate Teacher,
The best Achiever Award
in II language
English in the year 2016-17



**Mrs. Priya**
M.Sc., B.Ed
Trained Graduate Teacher,



**Mrs. Mallika R Nayak**
M.A., B.Ed.
Trained Graduate Teacher,
The best Achiever Award
in III language
Hindi in the year 2016-17



**Ms. Shilpa Kumari**
M.A., B.Ed.
Trained Graduate Teacher,
The best Achiever
Award in Social Science
in the year 2016-17



**Mrs. Chandrakala A J**
M.A., B.Ed.
Trained Graduate Teacher,



**Mrs. Gayathri**
B.A., B.Ed.
Trained Graduate Teacher,



**Mrs. Pushpalatha**
M.A., B.Ed.
Trained Graduate Teacher,



**Mrs. Shambhavi**
B.A., B.Ed
Trained Graduate Teacher,
Cleared TET and CET.



**Mrs. Latha R D'Souza**
B.Com., D.Ed.
Assistant Teacher,



**Mrs. Vaishali Lakshman Moily**
B.A., B.Ed.
Assistant Teacher,



**Mrs. Reshma Salis**
C.P.Ed.
Physical Education Teacher



**Mrs. Preethi Shettigar**
B.A., D.Ed.
Assistant Teacher,



**Mrs. Pavithra Naika**
M.A., B.Ed
Assistant Teacher,
Cleared TET.



**Mrs. Akshatha Nayak**
B.Sc., B.Ed.
Trained Graduate Teacher,



**Ms. Swathi**
B.Sc., B.Ed.
Trained Graduate Teacher,



**Mrs. Prathima M K**
M.A., D.Ed.
Assistant Teacher,



**Mrs. Chithravathi H J**
B.Sc., B.Ed.
Trained Graduate Teacher,
Cleared TET.



**Mr. Kiran Kumar**
D.P.Ed.
Assistant Physical
Education Teacher

## ಸಂಸ್ಥಾಪಕರ ದಿನದಂದು ವಿವಿಧ ಸಮಾಜಮುಖಿ ಕಾರ್ಯಕ್ರಮಗಳ ನೋಟ

ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ದಿ.ಗೋಪ ಶೆಟ್ಟಿಯವರ ಜನ್ಮ ಶತಮಾನೋತ್ಸವದ ಸಂಭ್ರಮದ ವರ್ಷ 2021. ತಾನು ಎಷ್ಟೇ ಎತ್ತರಕ್ಕೇರಿದರೂ ನಮ್ಮ ಗೌರವವು ಅಷ್ಟೇ ಕೆಳಹಂತದವರ ಮೇಲೂ ಇರಬೇಕು ಎನ್ನುವ ಕಳಕಳಿ ಹೊಂದಿದವರು ಗೋಪಜ್ಜರು. ತಾನು ದುಡಿಯುತ್ತಾ ಇನ್ನೊಬ್ಬರ ದುಡಿಮೆಗೂ ನೆರವಾಗುತ್ತಾ ತಾನು ಬೆಳೆದು ಇತರರನ್ನು ಬೆಳೆಸಿದವರು. ಅಶಕ್ತರ ದನಿಗೂ ಮನ ಮಿಡಿಯುತ್ತಿದ್ದ ಗೌರವಾನ್ವಿತ ವ್ಯಕ್ತಿತ್ವ.
ದಿ. ಗೋಪ ಶೆಟ್ಟಿಯವರ ಕನಸಿನ ಕೂಸಾದ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳು ಪ್ರತಿ ವರ್ಷವೂ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸಾಧನೆಗೈಯುತ್ತಾ ವಿದ್ಯಾರ್ಥಿಗಳ ಜ್ಞಾನ ದೇಗುಲವಾಗಿದೆ. ಗೋಪ ಶೆಟ್ಟಿಯವರು ಸ್ವಭಾವತಃ ಮೇರು ವಿಚಾರವಂತರು ಹಾಗೂ ದೂರದೃಷ್ಟಿಯುಳ್ಳ ಸ್ವಭಾವದವರಾದ್ದರಿಂದ ಅವರ ವಿಚಾರಧಾರೆಗಳನ್ನು ಕೊಂಚ ಮಟ್ಟಿಗೆ ನನಸಾಗಿಸುವ ನಿಟ್ಟಿನಲ್ಲಿ ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ.ಸುಧಾಕರ್ ಶೆಟ್ಟಿಯವರು ಕಳೆದ ಹಲವು ವರ್ಷಗಳಿಂದ ಸಮಾಜಮುಖಿ ಕಾರ್ಯಗಳಿಗೆ ಮುಂದಾಗಿರುವುದು ಅತ್ಯಂತ ಸಂತೋಷಕರ ಸಂಗತಿ. ಅಂತೆಯೇ ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರಾದ ದಿ.ಗೋಪ ಶೆಟ್ಟಿಯವರ ಜನ್ಮದಿನದ ಪ್ರಯುಕ್ತ ಆಗಸ್ಟ್ 21, 2021ರಂದು ಜ್ಞಾನಸುಧಾ ಆವರಣದಲ್ಲಿ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**ರಕ್ತದಾನ ಶಿಬಿರ :** ದಾನಗಳಲ್ಲಿ ಶ್ರೇಷ್ಠ ದಾನವೆಂದು ಕರೆಸಿಕೊಂಡ ರಕ್ತದಾನವನ್ನು ಜ್ಞಾನಸುಧಾ ಬೋಧಕ ಬೋಧಕೇತರ ಸಿಬ್ಬಂಧಿವರ್ಗ, ಜ್ಞಾನಸುಧಾ ಬಳಗದ ಸಹಕಾರದಿಂದ ರಕ್ತದಾನ ಶಿಬಿರ ಆಯೋಜಿಸಲಾಗುತ್ತದೆ.

**ಗಾಲಿಕುರ್ಚಿ ವಿತರಣೆ :** ವಿಕಲ ಚೇತನರಿಗೆ ನೆರವಾಗುವ ನಿಟ್ಟಿನಲ್ಲಿ ಕುಕ್ಕುಂದೂರು ಹಾಗೂ ಅಜೆಕಾರು ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಡುವ 12 ಜನ ದಿವ್ಯಾಂಗರಿಗೆ ಗಾಲಿ ಕುರ್ಚಿ ವಿತರಿಸಲಾಗುವುದು.

**ಪೌರಕಾರ್ಮಿಕರಿಗೆ ಧನ ಸಹಾಯ:** ಊರಿನ ಹಾಗೂ ಪಟ್ಟಣದ ಸ್ವಚ್ಛತೆಯನ್ನು ಕಾಪಾಡುವಲ್ಲಿ ಮಹತ್ತರ ಪಾತ್ರ ವಹಿಸುತ್ತಿರುವ ಅಜೆಕಾರು ಹೋಬಳಿ ಹಾಗೂ ಕುಕ್ಕುಂದೂರು ಗ್ರಾಮ ಪಂಚಾಯತ್ ಹಾಗೂ ಕಾರ್ಕಳ ಪುರಸಭಾ ವ್ಯಾಪ್ತಿಯ ಒಟ್ಟು 48 ಪೌರಕಾರ್ಮಿಕರನ್ನು ಗುರುತಿಸಿ ಕಿರುಕಾಣಿಕೆಯನ್ನು ನೀಡಲಾಗುವುದು.

**ಅನಾಥಾಲಯಕ್ಕೆ ಧನ ಸಹಾಯ:** ವೃದ್ಧರ ಪಾಲಿನ ಆಶಾದೀಪವಾಗಿರುವ ಸುರಕ್ಷಾ ಚಾರಿಟೇಬಲ್ ಟ್ರಸ್ಟ್ ಇವರಿಗೆ ಹತ್ತು ಸಾವಿರರೂ. ಹಾಗೂ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರಾವಿಡೆನ್ಸ್ ಕಾನ್ವೆಂಟ್ ಬಲ್ಲುಂಜೆ ಇವರಿಗೆ 25ಸಾವಿರ ರೂ.ಗಳ ನೆರವು ನೀಡಲಾಗುವುದು.

**ಸಾಧಕರಿಗೆ ಪುರಸ್ಕಾರ :** ದ್ವಿತೀಯ ಪಿಯುಸಿ 2021ರ ವಾರ್ಷಿಕ ಫಲಿತಾಂಶದಲ್ಲಿ 600ಕ್ಕೆ 600 ಅಂಕ ಗಳಿಸಿದ ಜ್ಞಾನಸುಧಾದ 43 ಸಾಧಕ ವಿದ್ಯಾರ್ಥಿಗಳನ್ನು ಹಾಗೂ ಪ್ರೌಢಶಾಲಾ ವಿಭಾಗದ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಉನ್ನತ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು.

### Jnanasudha NEET Foundation Course -2025

Jnanasudha NEET Foundation Course –2025 is an online PCB foundation course initiated by Jnanasudha PU college for class 9 students all over Karnataka. Keeping in view the tough competition for competitive exams like NEET, students need to be well prepared for such exams right from an early age. This course is therefore designed for NEET aspirants (PCB) who want to pursue MBBS to become future doctors. Class 9 students from across Karnataka state can enroll to this online course and reap benefits of the valuable coaching from a team of well experienced faculty. Starting to study for NEET right from 9th standard will help aspirants in enhancing their fundamental knowledge. This course will enable the students to face NEET 2025 entrance confidently as they will get an opportunity to be well equipped with the entire syllabus by 2025.

The course is efficiently coordinated by Mrs. Juliet Babitha D'Souza, the HOD of Biology department, Karkala Jnanasudha PU College. 44 students of 9th std across Karnataka have already enrolled for the course which started on the 17th of June 2021 .

### ವೈಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಅಭಿಷೇಕ್‌ಗೆ ದ್ವಿತೀಯ ಸ್ಥಾನ




ಕರ್ನಾಟಕ ವೈಟ್ ಲಿಫ್ಟಿಂಗ್ ಸಂಸ್ಥೆ ಸಹಯೋಗದಲ್ಲಿ ಆಳ್ವಾಸ್ ವಿದ್ಯಾಗಿರಿಯಲ್ಲಿ 21ನೇ ಫೆಬ್ರವರಿ 2021 ರಂದು ನಡೆದ ರಾಜ್ಯಮಟ್ಟದ ವೈಟ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವಕಾಲೇಜಿನ ವಾಣಿಜ್ಯ ವಿಭಾಗದ ಪ್ರಥಮ ಪಿಯುಸಿ ವಿದ್ಯಾರ್ಥಿಅಭಿಷೇಕ್ ಕೆ. ಶೆಟ್ಟಿ 89 ಕೆ.ಜಿ. ದೇಹತೂಕದ ವಿಭಾಗದಲ್ಲಿ ಭಾಗವಹಿಸಿ 147 ಕೆ.ಜಿ. ಭಾರವನ್ನು ಎತ್ತಿ ದ್ವಿತೀಯ ಸ್ಥಾನಿಯಾಗಿ ಹೊರಹೊಮ್ಮಿದ್ದಾರೆ.

### ಕಾರ್ಕಳ ಜ್ಞಾನಸುಧಾ : ಸ್ವಾತಂತ್ರ್ಯೋತ್ಸವ ಸಂಭ್ರಮ



ಭಾರತವು ವಿಕಾಸದೆಡೆ ಸಾಗುತ್ತಿದೆ. ಪ್ರತಿಯೊಬ್ಬ ಭಾರತೀಯನೂ ಮುಂದಿನ ಶತಮಾನೋತ್ಸವದ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ವಿಶ್ವಗುರು ಭಾರತವಾಗಿ ಮಾದರಿ ರಾಷ್ಟ್ರವಾಗಲು ಪಣತೊಡಬೇಕು ಎಂದು ಕಾರ್ಕಳ ಜೀವ ವಿಮಾ ನಿಗಮದ ನಿವೃತ್ತ ಆಡಳಿತಾಧಿಕಾರಿ, ಅಂತರಾಷ್ಟ್ರೀಯ ಕ್ರೀಡಾಪಟು ಶ್ರೀ ಪದ್ಮನಾಭ ಭಂಡಿ ಹೇಳಿದರು.

ಅವರು ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ವತಿಯಿಂದ ಗಣಿತ ನಗರದಲ್ಲಿ 75ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣವನ್ನು ನೇರವೇರಿಸಿ ಮಾತನಾಡಿದರು. ಇದೇ ಸಂದರ್ಭ ಅಜೆಕಾರು ಪದ್ಮಗೋಪಾಲ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿ, ಟ್ರಸ್ಟಿ ಕರುಣಾಕರ್ ಶೆಟ್ಟಿ, ಸಂಸ್ಥೆಯ ಹಿತೈಷಿಗಳಾದ ತ್ರಿವಿಕ್ರಮ ಕಿಣಿ, ದೇವೇಂದ್ರ ನಾಯಕ್, ಉಭಯ ಸಂಸ್ಥೆಗಳ ಪ್ರಾಂಶುಪಾಲರುಗಳು, ಉಪ್ರ ಪ್ರಾಂಶುಪಾಲರುಗಳು, ಬೋಧಕ–ಬೋಧಕೇತರ ಸಿಬ್ಬಂದಿವರ್ಗ ಉಪಸ್ಥಿತರಿದ್ದರು. ಉಪನ್ಯಾಸಕಿ ಶಮಿತ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

### ಉಡುಪಿ ಜ್ಞಾನಸುಧಾ : ಸ್ವಾತಂತ್ರ್ಯೋತ್ಸವ ಸಂಭ್ರಮ



ಉಡುಪಿಯ ನಾಗಬನ ಕ್ಯಾಂಪಸ್ನಲ್ಲಿರುವ ಉಡುಪಿ ಜ್ಞಾನಸುಧಾ ಪದವಿ ಪೂರ್ವಕಾಲೇಜಿನಲ್ಲಿ (ಉ) 75ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣವನ್ನು ಉಡುಪಿಯ ಒಳಾಂಗಣ ವಿನ್ಯಾಸಕ ಶ್ರೀ ಪ್ರಶಾಂತ್ ಶೆಟ್ಟಿ ನೇರವೇರಿಸಿದರು. ಇದೇ ಸಂದರ್ಭ ಅಜೆಕಾರು ಪದ್ಮಗೋಪಾಲ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಸುಧಾಕರ್ ಶೆಟ್ಟಿ, ಟ್ರಸ್ಟಿ ಕರುಣಾಕರ್ ಶೆಟ್ಟಿ, ಪ್ರಾಂಶುಪಾಲ ಶ್ರೀ ಗಣೇಶ್ ಶೆಟ್ಟಿ, ಸಂಸ್ಥೆಯ ಹಿತೈಷಿ ದೇವೇಂದ್ರ ನಾಯಕ್, ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿವರ್ಗ ಉಪಸ್ಥಿತರಿದ್ದರು. ಉಪನ್ಯಾಸಕಿ ಶ್ರೀಮತಿ ಕೀರ್ತಿ ಹರೀಶ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಜ್ಞಾನಸುಧಾ : ಸಾಂಸ್ಕೃತಿಕ ಮತ್ತು ಕ್ರೀಡಾ ಸಾಧನೆ

75ನೆಯ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗಾಗಿ ಭಾಷಣ, ರಸಪ್ರಶ್ನೆ ಮತ್ತು ದೇಶಭಕ್ತಿಗೀತೆ ಸ್ಪರ್ಧೆಗಳನ್ನು ಆನ್‌ಲೈನ್ ಮುಖಾಂತರ ಏರ್ಪಡಿಸಲಾಯಿತು.




ಯುನೈಟೆಡ್ ಕರ್ನಾಟಕ ಚೆಸ್ ಅಸೋಸಿಯೇಶನ್ (ರಿ) ಜೂನ್ ತಿಂಗಳಲ್ಲಿ ಆಯೋಜಿಸಿದ ಕರ್ನಾಟಕ ರಾಜ್ಯ ಯುತ್ & ಕೆಡೆಟ್ ಆನ್‌ಲೈನ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ದಿಶಾ ಯು.ಎ 18ರ ಒಳಗಿನ ವಯೋಮಿತಿಯಲ್ಲಿ 5ನೇ ಸ್ಥಾನವನ್ನು ಪಡೆದಿದ್ದಾರೆ ಹಾಗೂ ಕೆ.ಐ.ಒ.ಸಿ.ಎಲ್.ಲಿಮಿಟೆಡ್ ಮಂಗಳೂರು ಇವರು ನಡೆಸಿದ ಅಂತರ್ ಜಿಲ್ಲಾಮಟ್ಟದ ಓಪನ್ ರ್‍ಯಾಪಿಡ್ ಚೆಸ್ ಟೂರ್ನಮೆಂಟ್‌ನ 13ರ ಒಳಗಿನ ವಯೋಮಿತಿಯಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿರುತ್ತಾರೆ. ಬೆಳ್ತಂಗಡಿಯಲ್ಲಿ ನಡೆದ ಓಪನ್ ಚೆಸ್ ಟೂರ್ನಮೆಂಟ್‌ನ 15ರ ಒಳಗಿನ ವಯೋಮಿತಿಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

ರೋಟರಿ ಕ್ಲಬ್ ಕಾರ್ಕಳ ವತಿಯಿಂದ ಕಾರ್ಕಳ ತಾಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ನಮ್ಮ ಶಾಲೆಯ ಏಳನೆಯ ತರಗತಿಯ ವಿದ್ಯಾರ್ಥಿ ಸುಮಿತ್ ಕಿಣಿ "ಕಥೆ ಹೇಳೋಣ ಬನ್ನಿ" ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪಡೆದಿದ್ದಾರೆ.




ಶೈನ್ ಸ್ಪೋರ್ಟ್ಸ್ ಕರಾಟೆ ಅಕಾಡೆಮಿ ಲಕ್ಷ್ಮೇಶ್ವರ ಇವರು ಆಗಸ್ಟ್ 1, 2021ರಂದು ಆಯೋಜಿಸಿದ್ದ ರಾಷ್ಟ್ರಮಟ್ಟದ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ನಮ್ಮ ಶಾಲೆಯ ಆರನೆ ತರಗತಿಯ ವಿದ್ಯಾರ್ಥಿನಿ ಹಿಮಾನಿ ಡಿ ಶೆಟ್ಟಿ ಇವರು ಪ್ರಥಮ ಬಹುಮಾನವನ್ನು ಗಳಿಸಿರುತ್ತಾರೆ.



# ಜ್ಞಾನಸುಧಾದ ನಡಿಗೆ ಕೃಷ್ಣನೂರಿಗೆ, ಉಡುಪಿ ಜ್ಞಾನಸುಧಾ ಪದವಿ ಪೂರ್ವಕಾಲೇಜು ಲೋಕಾರ್ಪಣೆಗೆ ಸಜ್ಜು













ಈ ವರ್ಷ 2021, ಸಂಸ್ಥಾಪಕ ದಿ.ಗೋಪ ಶೆಟ್ಟಿಯವರ ಜನ್ಮಶತಮಾನೋತ್ಸವ ಹಾಗೂ ಕಾರ್ಕಳ ಜ್ಞಾನಸುಧಾ ಪದವಿಪೂರ್ವ ಕಾಲೇಜಿಗೆ ದಶಮಾನೋತ್ಸವದ ಸಂಭ್ರಮ. ಈ ಸಂಭ್ರಮದ ಕೊಡುಗೆ ಎನ್ನುವಂತೆ ಕೃಷ್ಣನೂರಿನ ಉಡುಪಿಯಲ್ಲಿ ಅಷ್ಟಮಠಗಳಲ್ಲೊಂದಾದ ಕೃಷ್ಣಾಪುರ ಮಠದ ಪೂಜ್ಯ ಯತಿ ಶ್ರೀ ಶ್ರೀ ವಿದ್ಯಾಸಾಗರತೀರ್ಥ ಶ್ರೀಪಾದರ ಆಶೀರ್ವಾದದೊಂದಿಗೆ ಉಡುಪಿಯ ಕಲ್ಸಂಕ ಸಮೀಪ **'ನಾಗಬನ ಕ್ಯಾಂಪಸ್'** ಎಂಬ ಸ್ಥಳನಾಮದೊಂದಿಗೆ, ಉಡುಪಿ ಜ್ಞಾನಸುಧಾ ಪದವಿ ಪೂರ್ವ ಕಾಲೇಜು ಲೋಕಾರ್ಪಣೆಗೆ ಸಜ್ಜಾಗಿ ನಿಂತಿದೆ. ಉಡುಪಿಯ ಸುತ್ತಮುತ್ತಲಿನ ಜ್ಞಾನಸುಧಾ ಅಭಿಮಾನಿ ಪೋಷಕರ, ವಿದ್ಯಾರ್ಥಿಗಳ ಬಹುದಿನಗಳ ಬೇಡಿಕೆ ಈಡೇರಿ, ಅದೆಷ್ಟೋ ವಿದ್ಯಾರ್ಥಿಗಳಿಗೆ ವರದಾನವಾಗಲಿದೆ.

ವಿಜ್ಞಾನ ವಿಭಾಗದಲ್ಲಿ ಪಿ.ಸಿ.ಎಂ.ಬಿ, ಪಿ.ಸಿ.ಎಂ.ಸಿ, ಕೋರ್ಸ್ ಲಭ್ಯವಿದ್ದು, ವರ್ಷಕ್ಕೆ 180 ವಿದ್ಯಾರ್ಥಿಗಳ ದಾಖಲಾತಿಯೊಂದಿಗೆ ಪ್ರತಿಯೊಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಅಭ್ಯುದಯಕ್ಕೆ ಉತ್ತೇಜನ ನೀಡಲಿದೆ. ಮೂಲ ಸಂಪನ್ಮೂಲಗಳನ್ನು ಒಳಗೊಂಡ ಸುಸಜ್ಜಿತವಾದ ನವೀಕೃತ ಕಟ್ಟಡ. ಕಂಪ್ಯೂಟರ್ ಲ್ಯಾಬ್ ಮತ್ತು ವಿಜ್ಞಾನ ಪ್ರಯೋಗಾಲಯ ಸೇರಿದಂತೆ ಕಲಿಕೆಗೆ ಪೂರಕ ಪ್ರಶಾಂತ ವಾತಾವರಣವನ್ನು ಹೊಂದಿದೆ.

ಪ್ರಾಂಶುಪಾಲ ಹಾಗೂ ಗಣಕವಿಜ್ಞಾನ ವಿಭಾಗದ ಮುಖ್ಯಸ್ಥ ಶ್ರೀ ಗಣೇಶ್ ಶೆಟ್ಟಿ, ಉಪ ಪ್ರಾಂಶುಪಾಲ ಹಾಗೂ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥ ಶ್ರೀ ಸಂತೋಷ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಮಹಾದೇವಗೌಡ, ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥ ಶ್ರೀ ಶ್ರೀನಿಧಿ ಭಾಗವತ್, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥೆ ಶ್ರೀಮತಿ ಲತಾ ಶೆಟ್ಟಿಯವರನ್ನೊಳಗೊಂಡ ನುರಿತ ಉತ್ಸಾಹಿ ಉಪನ್ಯಾಸಕ ವರ್ಗವು ಗುಣಮಟ್ಟದ ಶಿಕ್ಷಣ ನೀಡಲು ಸಿದ್ಧರಾಗಿದ್ದಾರೆ. ನೀಟ್, ಜೆಇಇ, ಕೆಸಿಇಟಿ, ಕೆವಿಪಿವೈ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಜ್ಞ ಸಂಪನ್ಮೂಲ ಉಪನ್ಯಾಸಕರಿಂದ ತರಬೇತಿ ಹಾಗೂ ಪೂರ್ವಭಾವಿಯಾಗಿ 250ಕ್ಕೂ ಹೆಚ್ಚು ಕಂಪ್ಯೂಟರೀಕೃತ ಮಾಕ್ ಟೆಸ್ಟ್‌ಗಳನ್ನು ನಡೆಸಲಿದೆ. ಪ್ರತಿದಿನ ಸಂಜೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ವಿದ್ಯಾರ್ಥಿಗಳಿಗೆ ಯಾವುದೇ ಪಠ್ಯ ಸಮಸ್ಯೆಗಳ ಪರಿಹಾರಕ್ಕೆ ಹಾಗೂ ಅಭ್ಯಾಸ ಚಟುವಟಿಕೆಗೆ ಸಮಯಾವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿಯ ಪ್ರಗತಿಯ ಪರಿಶೀಲನೆಗೆ ಪೋಷಕರು ಉಪನ್ಯಾಸಕ ಮೆಂಟರ್ ಮೂಲಕ ನಿರಂತರ ಸಂಪರ್ಕ ಇಟ್ಟುಕೊಳ್ಳಬಹುದು. ಉಡುಪಿ ಜ್ಞಾನಸುಧಾ ಸಂಸ್ಥೆಯನ್ನು ಸಂದರ್ಶಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿರುತ್ತದೆ.

## ಸಂಪಾದಕೀಯ

ಪ್ರಿಯ ಓದುಗರೆ,

ಕವಿ ಡಿ.ವಿ.ಜಿ.ಯವರು ಮುಂದಾಗುವುದನ್ನು ಹಿಂದೆಯೇ ಬಲ್ಲವರಾಗಿದ್ದರೇನೋ. ಅವರ 'ಮಂಕುತಿಮ್ಮನ ಕಗ್ಗ'ದಲ್ಲಿ ಒಂದು ಕಡೆ, 'ನರಪರೀಕ್ಷೆಯೆ ಬೊಮ್ಮನಾಶಯವೆ? ನಮ್ಮ ಬಾಳ್ । ಬರಿ ಸಮಸ್ಯೆಯೆ? ಅದರ ಪೂರಣವದೆಲ್ಲಿ? ಎಂದು ಪ್ರಶ್ನಿಸುತ್ತಾರೆ. ಇವೆಲ್ಲವೂ ಈಗ ಯಾವ ಗುರುವಿನಿಂದಲೂ ಉತ್ತರಿಸಲಾಗದ ಪ್ರಶ್ನೆಗಳು. ಪ್ರಕೃತಿ ನಮ್ಮನ್ನು ಉಳಿಸುವ ಮನಸ್ಸು ಮಾಡಿದರೆ, ಈ ಭೂಮಿಯ ಮೇಲೆ ಇನ್ನೆಷ್ಟು ವರ್ಷ ಬದುಕಿಯೇವು. ಆದ್ದರಿಂದ ಇರುವಷ್ಟು ದಿನ ಅಳು ನುಂಗಿ, ನಗು ಹಂಚಿ ಬದುಕಬೇಕಾಗಿದೆ.

ನಮ್ಮ ನಡುವೆ ಇದ್ದ 'ಗೋಪಜ್ಜ' ಮರೆಯಾಗಿ ಆಗಲೇ ನಾಲ್ಕೂವರೆ ವರ್ಷಗಳು ಸಂದವು. ಅವರಿಂದು ಇರುತ್ತಿದ್ದರೆ ಈ ವರ್ಷ ಅವರಿಗೆ ನೂರರ ಸಂಭ್ರಮ. ಅವರ ಸವಿ ನೆನಪನ್ನು ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್, ವಿವಿಧ ಸಮಾಜ ಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಅರ್ಥಪೂರ್ಣವಾಗಿಸುತ್ತಿದೆ.

ಕೊರೋನಾದ ಈ ಕಾಲಘಟ್ಟದಲ್ಲಿ ಧನಾತ್ಮಕ ಚಿಂತನೆಯನ್ನು ಮೈಗೂಡಿಸಿಕೊಳ್ಳಲು, ಸುಸಜ್ಜಿತ ಕ್ಯಾಂಟೀನ್‌ನ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಆಗೋಸ್ತು 21 ರಂದು ರಕ್ತದಾನ ಶಿಬಿರ, ವಿಕಲ ಚೇತನರಿಗೆ ವೀಲ್‌ಚೇರ್ ಕೊಡುಗೆ, ಪೌರಕಾರ್ಮಿಕರಿಗೆ ಸನ್ಮಾನ, ಎರಡು ಸೇವಾ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮಗಳಿವೆ. ಇಲಾಖೆಯ ಅನುಮತಿಯೊಂದಿಗೆ ಕಡಿಯಾಳಿ ಉಡುಪಿಯ ನಾಗಬನ ಕ್ಯಾಂಪಸ್‌ನಲ್ಲಿ 'ಉಡುಪಿ ಜ್ಞಾನಸುಧಾ'ವನ್ನು ಆರಂಭಿಸುತ್ತಿರುವುದು ಸಂಸ್ಥೆಯ ಇನ್ನೊಂದು ಮೈಲಿಗಲ್ಲು.

ಆನ್ ಲೈನ್ ತರಗತಿಗಳನ್ನು ಸಮರ್ಥವಾಗಿ ಬಳಸಿಕೊಂಡಿರುವ ನಮ್ಮ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆ ಜೆ.ಇ.ಇ.ಮೈನ್ಸ್‌ನಲ್ಲಿ ಉತ್ಕೃಷ್ಟ ಸಾಧನೆ ಮಾಡಿದ್ದಾರೆ. ಪದವಿಪೂರ್ವ ಕಾಲೇಜಿಗೆ ಎನ್.ಸಿ.ಸಿ. ಸೀನಿಯರ್ ವಿಂಗ್ ದೊರೆತಿರುವುದು ಸಂಸ್ಥೆಯ ಹಿರಿಮೆಗೆ ಇನ್ನೊಂದು ಗರಿ ಮೂಡಿಸಿದೆ. ಈ ಸಂಧರ್ಭದಲ್ಲಿ ಸಂಸ್ಥೆಗೆ ಸದಾ ಬೆಂಬಲವಾಗಿ ನಿಂತಿರುವ ಅಭಿಮಾನಿಗಳೆಲ್ಲರಿಗೂ ನಾವು ಋಣಿಯಾಗಿದ್ದೇವೆ.

– ಸಂಪಾದಕರು

**ಸಂಪಾದಕರು**
'ಜ್ಞಾನಸುಧಾ' ಪತ್ರಿಕೆ, ಗಣಿತ ನಗರ, ಕುಕ್ಕುಂದೂರು
ಕಾರ್ಕಳ – 575117, ಉಡುಪಿ ಜಿಲ್ಲೆ
ಸಂದೇಶ
<JNANASUDHA><NAME><PLACE>
<MESSAGE>
to
9019736528
Ph: 08258-298455, 298655
Email:jnanasudha@gmail.com

'ನಹಿ ಜ್ಞಾನೇನ ಸದೃಶಂ' – ಜ್ಞಾನಸುಧಾದ ನಡಿಗೆ ಜ್ಞಾನದೆಡೆಗೆ

Printed & Published by AJEKAR PADMA GOPAL EDUCATION TRUST, 'Padma Gopal', Joduraste, Karkala - 576 117
Editorial Board : Principal, KJSPUC & KJSEMHS, Mrs. Jyothi Padmanabha, Mr. Manjunath. *Designed* @ RAJ Graphics, Hirebettu
Editorial Office : KARKALA JNANASUDHA P.U. COLLEGE, GANIT NAGAR, KUKKUNDOOR, KARKALA - 576 117, Email : jnanasudha@gmail.com Ph: 08258-298455, 298655